Tumbe International e-Magazine
ISSN : 2581-7728
A Multilanguage Magazine
Issue-2
Volume-3
July-Dec: 2020

# ನಡೆದಾಡುವ ದೇವರು ಡಾ. ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರು

**ಪಂಪಾಪತಿ ಎಸ್.ಕೆ.**
ಬಿ.ಎ. 4ನೇ ಸೆಮಿಸ್ಟರ್, (ಹೆಚ್.ಇ.ಕೆ.)
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು.

ಭಾರತದ ಭೂ ನಕ್ಷೆಯಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪಡೆದಿರುವ ನೆಲ ಕನ್ನಡನಾಡು. ಈ ನಾಡು 20-21 ಶತಮಾನದಲ್ಲಿ ಕಂಡ ಶರಣ ಪರಂಪರೆಯ ತ್ರಿವಿಧ ದಾಸೋಹ ಮೂರ್ತಿ ಸಿದ್ಧಗಂಗಾ ಕ್ಷೇತ್ರದ ಕರ್ನಾಟಕ ರತ್ನ, ಪದ್ಮವಿಭೂಷಣ, ಕಾಯಕಯೋಗಿ ಡಾ: ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು. ಪೂಜ್ಯ ಶ್ರೀಗಳು 1908 ಏಪ್ರಿಲ್ 01ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ಜನಿಸಿದರು. ತಂದೆ ಹೊನ್ನೇಗೌಡರು (ಪಟೇಲರು), ತಾಯಿ ಗಂಗಮ್ಮ. ಶ್ರೀಗಳ ಬಾಲ್ಯ ಹೆಸರು ಶಿವಣ್ಣ. ಚಿಕ್ಕವಯಸ್ಸಿನಲ್ಲಿ ಗುರುಭಕ್ತಿ-ದೈವಭಕ್ತಿಯನ್ನು ಹೊಂದಿದ್ದರು.

ವೀರಾಪುರ ಮತ್ತು ಪಾಲನಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, ನಾಗವಲ್ಲಿಯಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣ ತುಮಕೂರಿನಲ್ಲಿ ಸರ್ಕಾರಿ ಪ್ರೌಢಶಾಲಾ ಶಿಕ್ಷಣ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ.ಪದವಿ ವ್ಯಾಸಂಗ ಮಾಡಿದರು. 1980ರಲ್ಲಿ ಪೂಜ್ಯ ಶ್ರೀ ಉದ್ದಾನ ಶಿವಯೋಗಿಗಳಿಂದ ಶ್ರೀ ಸಿದ್ಧಗಂಗಾ ಮಠದ ಪಟ್ಟಾಧಿಕಾರ ಸ್ವೀಕಾರ. ಆಧ್ಯಾತ್ಮಿಕ ಆಳವಾದ ಅಧ್ಯಯನ, ಲೋಕ ಸೂಕ್ಷ್ಮಾವಲೋಕನ ಇವುಗಳಿಂದ ಶ್ರೀ ಮಠಕ್ಕೆ ಒದಗಿದ ಆಪತ್ತುಗಳನೆಲ್ಲಾ ದಾಟಿ ಮಹಾತ್ಮರಾದರು, ಶುದ್ಧ ಸಂಕಲ್ಪದ ಶಿವಯೋಗಿಗಳು ಪೂಜ್ಯ ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು.

ಪೂಜ್ಯ ಶ್ರೀಗಳು ತಮ್ಮ ಗಮನವನ್ನೆಲ್ಲಾ ಗ್ರಾಮೀಣ ಪ್ರದೇಶದ ಬಡವರು ಮತ್ತು ಅಸಹಾಯರ ಕಡೆಗೆ ಹಾಗೆಯೇ ಅವರ ಆದ್ಯತೆ ಗ್ರಾಮಂತರ ಶಿಕ್ಷಣ ಪ್ರಸಾರಕ್ಕೆ ಜೊತೆಗೆ ಉಚಿತ ಊಟ, ವಸತಿಗಳು ವಿದ್ಯಾರ್ಥಿಗಳಿಗೆ ನೀಡಬೇಕೆಂಬುದು ಆರೇಳು ದಶಕದ ಹಿಂದೆ 10-20 ವಿದ್ಯಾರ್ಥಿಗಳಿಂದ ಆರಂಭವಾದ ಶ್ರೀ ಸಿದ್ಧಗಂಗಾ ಶಿಕ್ಷಣ ವ್ಯವಸ್ಥೆಯಲ್ಲಿ ಇಂದು ನಾಡಿಗೆ ನಾಡೇ ಬೆರಗುಗೊಳ್ಳುವಂತೆ ಹತ್ತು ಸಾವಿರಕ್ಕೂ ಹೆಚ್ಚು ಗ್ರಾಮೀಣ ಬಡಮಕ್ಕಳಿಗೆ ಶ್ರೀಮಠದ ಆಶ್ರಯದಲ್ಲಿ ಉಚಿತ ಊಟ, ವಸತಿ ಮತ್ತು ಶಿಕ್ಷಣಕ್ಕೆ ವ್ಯವಸ್ಥೆಯಾಗಿದೆ. ಜೊತೆಗೆ ನಿತ್ಯ ಬರುವ ಸಾವಿರಕ್ಕೂ ಹೆಚ್ಚು ಯಾಂತ್ರಾ ವಿದ್ಯಾರ್ಥಿಗಳಿಗೆ ದಾಸೋಹ ನಡೆಯುತ್ತಲಿದೆ.

ಪರಮಪೂಜ್ಯ ಲಿಂಗೈಕ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳಿಗೆ ಹನ್ನೆರನೇ ಶತಮಾನದಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಆಂದೋಲನ ಮುಂದಾಳು ಬಸವಣ್ಣನವರೇ ಆದರ್ಶ. ಶರಣ ವಿಚಾರಧಾರೆಗಳನ್ನು ಕಾರ್ಯಾನುಷ್ಠಾನಕ್ಕೆ ತಂದ ಹಿರಿಮೆ ಪೂಜ್ಯರದು. ಶ್ರೀ ಸಿದ್ಧಗಂಗಾಕ್ಷೇತ್ರ ವಾಸ್ತವವಾಗಿ ಕಾಯಕ ದಾಸೋಹಗಳ ಒಂದು ಕಮ್ಮಟವೆನಿಸಿದೆ. ಪೂಜ್ಯ ಸ್ವಾಮಿಗಳವರ ಲೋಕಸೇವೆಯನ್ನು ಪರಿಗಣಿಸಿ 1965ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಸಂದಿದೆ. ಶ್ರೀಮಠದ ಭಕ್ತರಿಂದ ಪೂಜ್ಯರ ಪಟ್ಟಾಧಿಕಾರ ರಜತ ಮಹೋತ್ಸವ ಮತ್ತು ಅಮೃತ ಮಹೋತ್ಸವಗಳ ಆಚರಣೆ ನಡೆದಿದೆ. ಮತ್ತು ಶತಮಾನೋತ್ಸವ ನಡೆದಿದೆ.

ಸ್ವತಂತ್ರ್ಯ ಭಾರತ ಸ್ವಾಭಿಮಾನಿ ಮತ್ತು ಸ್ವಾವಲಂಭಿ ರಾಷ್ಟ್ರವಾಗಬೇಕೆಂದು ಪೂಜ್ಯರು ನಿತ್ಯ ಹಂಬಲ "ದಾನಕ್ಕಿಂತ ದಾಸೋಹ ದೊಡ್ಡದು" ಎಂದವರು. ಸಮಕಾಲೀನ ಪರಿಸರದ ಮಧ್ಯೆ ಸೇವೆ ಸಲ್ಲಿಸಿ 111 ವರ್ಷಗಳ ಸಾರ್ಥಕ ಸೇವೆಯನ್ನು ಮಾಡಿ ನಮ್ಮಲ್ಲಿ ಅನಾಥ ಭಾವವನ್ನು ಮೂಡುವಂತೆ ಮಾಡಿದ್ದಾರೆ. ಮಠದ ಮಕ್ಕಳಿಗೆ ತಂದೆ ತಾಯಿ ಬಂಧು-ಬಳಗವೆಲ್ಲವೂ ಆಗಿ ಅನ್ನ, ಅಕ್ಷರ, ಆಶ್ರಯದ ಮೂಲಕ ಮಕ್ಕಳನ್ನು ವಿವಿಧ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಲು ಕಳುಹಿಸಿದ ಮಹಾನ್ ಚೇತನ 21-01-2019ರಂದು ಸ್ವರ್ಗಕ್ಕೆ ನಡೆದರು.

ಶ್ರೀಗಳ ಧ್ವನಿ ನಿಂತಿರಬಹುದು, ನಡಿಗೆ ನಿಂತಿರಬಹುದು ಆದರೆ ಅವರ ವಿಚಾರ, ಸಂದೇಶಗಳು ಎಂದಿಗೂ ಜನಮನದಲ್ಲಿ ರಕ್ತದಂತೆ ಮಯ್ಯಲ್ಲಿ ಹರಿಯುತ್ತಿರುತ್ತದೆ.